**ಓಎಸ್ ನಂ3/2021**
**ಪಿಡಬ್ಲೂಃ 2**

**<u>ಸಾಕ್ಷಿಗೆ ದಿನಾಂಕ 22-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**
**<u>ಮುಖ್ಯ ವಿಚಾರಣೆ ವಾದಿ ಪರ ಶ್ರೀ ಕೆ.ಪಿ.ಬಿ. ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ. ನಾನು ಈ ಕೆಳಗಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ.

ವಾದಿಯು ಸಾಕ್ಷಿಗೆ ನೀಡಿದ ಒಟ್ಟು ಮುಖ್ತಿಯಾರ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ-1 ಎಂದು, ಉಪವಿಭಾಗ ದಂಡಾಧಿಕಾರಿಗಳು ಸೇಡಂ ಇವರು ಮಾಡಿದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ಮೇಲ್ಮನವಿಯ ಆದೇಶದ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ-2 ಎಂದು, ಸರ್ವೆ ನಂ. 558/1 ರ ಮ್ಯುಟೇಷನ ನಂ. 271/2002 ರ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ-2 ಎಂದು, ಸರ್ವೆ ನಂ. 558/1 ರ ಕೈಬರಹದ ಪಹಣಿ ಪತ್ರಿಕೆಯ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ-3 ಎಂದು, ಸರ್ವೆ ನಂ. 558*/1 ಎ ರ 10 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ-4 ರಿಂದ ನಿಶಾನೆ ಪಿ-13 ಎಂದು, ಸರ್ವೆ ನಂ. 558/1 ರ 11 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ-14 ರಿಂದ ನಿಶಾನೆ ಪಿ-24 ಎಂದು, ಸರ್ವೆ ನಂ. 558*/1 ಎ ರ ಮತ್ತೊಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಪಿ-25 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.